ಭದ್ರ ಅಚ್ಚುಕಟ್ಟು ಪ್ರಾಧಿಕಾರದ ನಾಮ ನಿರ್ದೇಶಕರಾಗಿ ಎಮ್. ರಾಜಪ್ಪ ನೇಮಕ



ಉದಯಕಾಲ ನ್ಯೂಸ್ ಕಡೂರು: ರಾಜ್ಯದ ಮುಖ್ಯಮಂತ್ರಿಗಳ ಆದೇಶದಂತೆ ಕಡೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ.ಎಸ್. ಆನಂದ್ ಅವರ ಶಿಫಾರಿಸಿನಿಂದ ಭದ್ರಾ ಅಚ್ಚುಕಟ್ಟು ಪ್ರಾಧಿಕಾರದ ನಾಮ ನಿರ್ದೇಶಕರನ್ನಾಗಿ ಯರದಕೆರೆ ಎಮ್. ರಾಜಪ್ಪ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ. ಪತ್ರಿಕೆಯೊಂದಿಗೆ ಎಮ್ ರಾಜಪ್ಪ ಮಾತನಾಡಿ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರು ಹಾಡಿಗೂ ಕಡೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ.ಎಸ್.ಆನಂದ್ ಅವರು ನನ್ನ ಮೇಲಿನ ನಂಬಿಕೆಯಿಟ್ಟು ಈ ಹುದ್ದೆಗೆ ನೇಮಕ ಮಾಡಿದ್ದಾರೆ, ಅವರ ನಂಬಿಕೆಗೆ ತಕ್ಕಂತೆ ಕಾರ್ಯನಿರ್ವಹಿಸಲಾಗುವುದು. ಆಯ್ಕೆ ಮಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮತ್ತು ಕ್ಷೇತ್ರದ ಶಾಸಕ ಕೆ.ಎಸ್. ಆನಂದ್ ಅವರಿಗೆ ಕೃತಜ್ಞತೆಯನ್ನು ಸಲ್ಲಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಪುರಸಭಾ ಮಾಜಿ ಅಧ್ಯಕ್ಷ ಬಂಡಾರಿ ಶ್ರೀನಿವಾಸ್ ಕಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಿಂದ್ರಮೌಳಿ, ಬೀರೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆಸಂದಿ ಕಲ್ಲೇಶ್, ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರುಗಳು ಅಭಿನಂದನೆ ಸಲ್ಲಿಸಿದರು.

ಸಂತ ಸೇವಾಲಾಲ್ ಮಹಾಮಠ ರಾಜ್ಯ ಸಮಿತಿಯ ಜಂಟಿ ಕಾರ್ಯದರ್ಶಿಯಾಗಿ ಮಂಜುನಾಥ್ ನಾಯಕ್ ಅವಿರೋಧ ಆಯ್ಕೆ



ಉದಯಕಾಲ ನ್ಯೂಸ್ ಕಡೂರು: ಸಂತ ಸೇವಾಲಾಲ್ ಮಹಾಮಠ ಸಮಿತಿ ಸೂರ್ಯಗೊಂಡನಕೊಪ್ಪ ಮಾಯಾಗಡ್ ಇದರ ರಾಜ್ಯ ಸಮಿತಿಯ ಪದಾಧಿಕಾರಿಗಳ ಚುನಾವಣೆಯ ಹಾವೇರಿ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳಾದ ನಾಗರಾಜ್ ನಾಯಕ್ ಇವರ ನೇತೃತ್ವದಲ್ಲಿ ಚುನಾವಣೆಯು ನಡೆದು ರಾಜ್ಯ ಸಮಿತಿಯ ಜಂಟಿ ಕಾರ್ಯದರ್ಶಿಗಳಾಗಿ ಕಡೂರು ತಾಲೂಕಿನ ಗೋವಿಂದಪುರ ಗ್ರಾಮದ ಮಂಜುನಾಥ್ ನಾಯಕ್ ಅವಿರೋಧವಾಗಿ ಆಯ್ಕೆ ಆಗಿರುತ್ತಾರೆ ಎಂದು ಘೋಷಿಸಿದರು. ಇವರ ಆಯ್ಕೆಯನ್ನು ಸಮಸ್ತ ಚಿಕ್ಕಮಗಳೂರು ಜಿಲ್ಲಾ ಬಂಜಾರ ಸಮಾಜವು ಶುಭ ಹಾರೈಸಿದೆ.

ಎಸ್.ಟಿ ಯುವಕರಿಗೆ ಸೋಲಾರ್ ಪಿವಿ ತರಬೇತಿಗೆ ಅರ್ಜಿ ಆಹ್ವಾನ

ಚಿತ್ರದುರ್ಗ: ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ನವದೆಹಲಿ ರವರ ಪಿಎಂ-ಜನ್ ಮನ್ ಹಾಗೂ ಡಿಎ-ಜೆಜಿಜೆಯುಎ ಯೋಜನೆಯಡಿ ಗ್ರಾಮಗಳಲ್ಲಿನ ಪರಿಶಿಷ್ಟ ಪಂಗಡ ಹಾಗೂ ನೈಜ ದುರ್ಬಲ ಬುಡಕಟ್ಟು ಸಮುದಾಯದ ಯುವಕರಿಗೆ ಸೋಲಾರ್ ಪಿವಿ ಉಚಿತ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಈ ಸಂಬಂಧ ಅರ್ಜಿ ಆಹ್ವಾನಿಸಲಾಗಿದೆ.

ಮಿನಿಸ್ಟ್ರಿ ಆಫ್ ನ್ಯೂ ಅಂಡ್ ರಿನ್ಯೂಯೆಬಲ್ ಎನರ್ಜಿ ಸಹಯೋಗದೊಂದಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಸೋಲಾರ್ ಪ್ರೊಪ್ರೆನ್ಯೂರ್ಸ್ ಕಾರ್ಯಕ್ರಮದಡಿ ಸೋಲಾರ್ ಪಿವಿ ಹೆಲ್ಪ್-ಕಮ್-ಅಸಿಸ್ಟೆಂಟ್ ಟೆಕ್ನೀಷಿಯನ್ಸ್' ತರಬೇತಿ ನೀಡಲಾಗುತ್ತದೆ. ಈ ತರಬೇತಿ ಪಡೆಯಲು ಆಸಕ್ತಿಯಿರುವ ಪಿವಿಟಿಜಿ ಮತ್ತು ಎಸ್‌ಟಿ ಸಮುದಾಯದ ಯುವಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಕನಿಷ್ಠ 5ನೇ ತರಗತಿ ಉತ್ತೀರ್ಣರಾಗಿರಬೇಕು, ಓದಲು ಮತ್ತು ಬರೆಯಲು ಡಿತಿಳಿದಿರಬೇಕು ಹಾಗೂ ತರಬೇತಿಯಲ್ಲಿ ಭಾಗವಹಿಸಲು ಮತ್ತು ಅಗತ್ಯ ತಾಂತ್ರಿಕ ಕೌಶಲ್ಯಗಳನ್ನು ಕಲಿಯಲು ಆಸಕ್ತಿ ಹೊಂದಿರಬೇಕು. ಅಭ್ಯರ್ಥಿಗಳು ಆಧಾರ್ ಕಾರ್ಡ್ ಹಾಗೂ ಜಾತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು.

ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳು ನಮೂನೆಯಲ್ಲಿ ಮಾಹಿತಿ ಭರ್ತಿ ಮಾಡಿ, ಅಗತ್ಯ ದಾಖಲಾತಿಗಳೊಂದಿಗೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಚಿತ್ರದುರ್ಗ (ಜೆ.ಸಿ.ಆರ್. ಬಡಾವಣೆ, 4ನೇ ಕ್ರಾಸ್ (ಪೂರ್ವ), ಗಣೇಶ ದೇವಸ್ಥಾನದ ಹತ್ತಿರ, ಚಿತ್ರದುರ್ಗ) ಅಥವಾ ಆಯಾ ತಾಲೂಕಿನ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಹಾಗೂ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆಯಿಂದ ಅರ್ಜಿಗಳನ್ನು ಪಡೆದು ಸಲ್ಲಿಸಬಹುದು.

ಅರ್ಜಿಗಳನ್ನು ಭರ್ತಿ ಮಾಡಿ ನವೆಂಬರ್ 25ರ ಸಂಜೆ 5.30ರೊಳಗೆ ಆಯಾ ತಾಲೂಕಿನ ಕಚೇರಿಯಲ್ಲಿ ಸಲ್ಲಿಸಬೇಕು. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಭಕ್ತಿಭಾವದ ಸಂಭ್ರಮದಲ್ಲಿ ಅಯ್ಯಪ್ಪ ಸ್ವಾಮಿ ಮಂಡಲ ಪೂಜಾ ಆರಂಭೋತ್ಸವ



ಉದಯ ಕಾಲ ನ್ಯೂಸ್ ಚಳ್ಳಕೆರೆ: ನಗರದ ಬಳ್ಳಾರಿ ರಸ್ತೆಯ ಕರಿಬಸವಜ್ಜಯ್ಯ ದೇವಸ್ಥಾನದಲ್ಲಿ ಹರಿಹರಸುತ ಸೇವಾ ಸಮಿತಿ ವತಿಯಿಂದ ಅಯ್ಯಪ್ಪ ಸ್ವಾಮಿ ಮಂಡಲ ಪೂಜಾ ಋತುವಿನ ಅಂಗವಾಗಿ ಸೋಮವಾರ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಭಕ್ತಿಭಾವದಿಂದ ನೆರವೇರಿಸಲಾಯಿತು.

ಮಂಡಲ ಪೂಜಾ ಆರಂಭೋತ್ಸವದ ಅಂಗವಾಗಿ ಅಯ್ಯಪ್ಪ ಸ್ವಾಮಿ ಸನ್ನಿಧಾನವನ್ನು ಬೃಹತ್ ಸ್ವಾಮಿ ಭಾವಚಿತ್ರ, ಬಣ್ಣಬಣ್ಣದ ಪುಷ್ಪಮಾಲೆಗಳು ಹಾಗೂ ಸಾಂಪ್ರದಾಯಿಕ ದೀಪಗಳಿಂದ ವಿಶೇಷವಾಗಿ ಅಲಂಕರಿಸಲಾಗಿತ್ತು. ಸ್ವಾಮಿಯ ವಿಗ್ರಹಕ್ಕೆ ಪುಷ್ಪಾಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಿದ ಭಕ್ತರು, ಭಜನೆ ಮೂಲಕ ಭಕ್ತಿಪರವಶತೆಯಲ್ಲಿ ಮಿಂದೆದ್ದರು. ಪ್ರಾಜಾ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಪವಿತ್ರ ಹದಿನೆಂಟು ಮೆಟ್ಟಿಲುಗಳಿಗೆ ವಿಶೇಷ ದೀಪಾರಾಧನೆ ನೆರವೇರಿಸಲಾಯಿತು. ಮೆಟ್ಟಿಲುಗಳ ಕೆಳಭಾಗದಿಂದ ಮೇಲ್ಭಾಗದವರೆಗೆ ದೀಪಗಳನ್ನು ಬೆಳಗಿಸುವ ಮೂಲಕ ಧಾರ್ಮಿಕ ಶ್ರದ್ಧೆ ಹಾಗೂ ಭಕ್ತಿಯ ವಾತಾವರಣ ನಿರ್ಮಿಸಲಾಯಿತು.

ಕಾರ್ಯಕ್ರಮದಲ್ಲಿ ನೂರಾರು ಅಯ್ಯಪ್ಪ ಭಕ್ತರು ಪಾಲ್ಗೊಂಡು ಸ್ವಾಮಿಯ ದರ್ಶನ ಪಡೆದು ಪೂಜೆ ಸಲ್ಲಿಸಿದರು. ಪೂಜಾ ವಿಧಿವಿಧಾನಗಳ ಬಳಿಕ ಮಾಲಾಧಾರಿ ಸ್ವಾಮಿಗಳು ಸೇರಿದಂತೆ ಆಗಮಿಸಿದ ಎಲ್ಲ ಭಕ್ತರಿಗೆ ಅನ್ನದಾನ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಮಂಜುನಾಥ್ (ಕಂಚಿ), ಬಾಬು ಗುರುಸ್ವಾಮಿ, ಡಾ. ಪ್ರದೀಪ್, ದರ್ಶನ್, ದುಗ್ಗಾವರ ಮಂಜು ಸೇರಿದಂತೆ ಅನೇಕ ಅಯ್ಯಪ್ಪ ಭಕ್ತರು ಉಪಸ್ಥಿತರಿದ್ದರು.

ಸೌಜನ್ಯಕೊಲೆ ಪ್ರಕರಣ; ಮೂವರು ವೈದ್ಯರ ಮೆಡಿಕಲ್ ಬೋರ್ಡ್ ರಚನೆ



ಉದಯಕಾಲ ನ್ಯೂಸ್, ಮಂಗಳೂರು: ಧರ್ಮಸ್ಥಳದ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಆದೇಶದ ಮೇರೆಗೆ ವಿಶೇಷ ತನಿಖಾ ತಂಡ (ಎಸ್ ಐಟಿ) ಮೂವರು ವೈದ್ಯರನ್ನೊಳಗೊಂಡ ಮೆಡಿಕಲ್ ಬೋರ್ಡ್ ರಚಿಸಿದೆ.

ಬೆಂಗಳೂರು, ಹಾವೇರಿ ಮತ್ತು ಬೆಳಗಾವಿ ಜಿಲ್ಲೆಗಳ ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ವಿಭಾಗದ ಮೂವರು ವೈದ್ಯರನ್ನು ಈ ಮೆಡಿಕಲ್ ಬೋರ್ಡ್‌ಗೆ ನೇಮಕ ಮಾಡಲಾಗಿದೆ. ತಂಡದಲ್ಲಿ ಓರ್ವ ಮಹಿಳಾ ವೈದ್ಯೆ ಹಾಗೂ ಇಬ್ಬರು ಪುರುಷ ವೈದ್ಯರಿರಲಿದ್ದಾರೆ. ಮೆಡಿಕಲ್ ಬೋರ್ಡ್ ರಚಿಸುವಂತೆ ಸುಪ್ರೀಂಕೋರ್ಟ್ ಆದೇಶ ನೀಡಿತ್ತು. ಈ ಹಿನ್ನೆಲೆಯಲ್ಲಿ ಎಸ್‌ಐಟಿ ಮುಖ್ಯಸ್ಥ ಚೇತನ್ ಸಿಂಗ್ ರಾಥೋಡ್ ಅವರು ಮೂವರು ವೈದ್ಯರನ್ನೊಳಗೊಂಡ ತಂಡವನ್ನು ರಚಿಸಿದ್ದಾರೆ. ಇತ್ತೀಚೆಗೆ ಎಸ್‌ಐಟಿ ಅಧಿಕಾರಿಗಳು ಸೌಜನ್ಯ ಮೃತದೇಹ ಪತ್ತೆಯಾಗಿದ್ದ ಮಣ್ಣಸಂಕದ ಕಾಡಿಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದರು. 14 ವರ್ಷಗಳ ಹಿಂದಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಅಂದು ಮೃತದೇಹ ಪತ್ತೆಯಾಗಿದ್ದ ಸ್ಥಳದಲ್ಲಿ ಘಟನೆಯ ಮರುಸೃಷ್ಟಿ (ಸೀನ್ ರೀಕ್ರಿಯೇಷನ್) ನಡೆಸಲಾಗಿತ್ತು. ಎಸ್‌ಐಟಿ ತನಿಖಾಧಿಕಾರಿಗಳ ನೇತೃತ್ವದಲ್ಲಿ ನಡೆದ ಈ ಪ್ರಕ್ರಿಯೆಯಲ್ಲಿ ಎಫ್‌ಎಸ್‌ಎಲ್ ಸಿಬ್ಬಂದಿಯೂ ಭಾಗಿಯಾಗಿದ್ದರು. ಸೌಜನ್ಯ ಅವರ ಮೃತದೇಹ ಪತ್ತೆಯಾ ಗಿದ್ದ ನಿಖರ ಸ್ಥಳವನ್ನು ಕುಟುಂಬಸ್ಥರು ಅಧಿಕಾರಿಗಳಿಗೆ ತೋರಿಸಿಕೊಟ್ಟಿದ್ದರು.

ಸುಪ್ರೀಂಕೋರ್ಟ್ ನಿರ್ದೇಶನದಂತೆ ಮೆಡಿಕಲ್ ಬೋರ್ಡ್ ರಚನೆಯಾಗಿರುವುದು ಪ್ರಕರಣದ ಮುಂದಿನ ತನಿಖೆಯಲ್ಲಿ ಮಹತ್ವ ಪಡೆದುಕೊಂಡಿದೆ.

UJJIVAN SMALL FINANCE BANK

ನೋಂದಾಯಿತ ಕಚೇರಿ: ಗ್ರೇಪ್ ಗಾರ್ಡನ್, ನಂ.27, 3ನೇ "ಎ" ಕ್ರಾಸ್, 18ನೇ ಮೇನ್, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 5600095, ಕರ್ನಾಟಕ.
ಶಾಖಾ ಕಚೇರಿ: ನಂ.1&2, ನೆಲ ಮಹಡಿ, ನಂ.78/4RS1-S2, ಲಿಮ್ರಾ ಹೈಟ್ಸ್ ಕಟ್ಟಡ, ಕೆ.ಬಿ. ಎಕ್ಟೆನ್ಷನ್, ಎಸ್ ಆರ್ ರಿಲಯನ್ಸ್ ಮಾರ್ಕೆಟ್, ದಾವಣಗೆರೆ, ಕರ್ನಾಟಕ–577 002

ಇ–ಹರಾಜು ಸೂಚನೆ

ಸೆಕ್ಯುರಿಟೈಸೇಶನ್ ಮತ್ತು ಹಣಕಾಸು ಆಸ್ತಿಗಳ ಪುನರ್‌ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ (SARFAESI ಕಾಯ್ದೆ) 2002 ರ ಅಡಿಯಲ್ಲಿ ಮಾರಾಟಕ್ಕೆ ಇ–ಹರಾಜು ಸೂಚನೆ, ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರ ನಿಯಮ 8(6) ಮತ್ತು 9(1) ರ ನಿಬಂಧನೆಗಳೊಂದಿಗೆ ಓದಿ.

ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಕೆಳಗೆ ಸಹಿ ಮಾಡಿರುವವರು, ಸರ್ಫೇಸಿ ಕಾಯ್ದೆಯ ಸೆಕ್ಷನ್ 13(4) ರ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನ ಆಸ್ತಿಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಸಾಲಗಾರರು ಮತ್ತು ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಬ್ಯಾಂಕಿನ ಬಾಕಿಗಳನ್ನು ವಸೂಲಿ ಮಾಡಲು ಕೆಳಗೆ ಉಲ್ಲೇಖಿಸಲಾದ ಖಾತೆಯಲ್ಲಿರುವ ಅಡಮಾನ ಆಸ್ತಿಗಳ ಇ–ಹರಾಜನ್ನು ಕೆಳಗೆ ನೋಡಿಸಲಾದ ದಿನಾಂಕದಂದು "ಎಲ್ಲಿ ಇದೆಯೋ ಅಲ್ಲಿ" ಮತ್ತು "ಹೇಗೆ ಇದೆಯೋ ಹಾಗೆಯೇ" ಎಂದು ನಡೆಸಲಾಗುತ್ತದೆ.

ಕ್ರಮ ಸಂಖ್ಯೆ	ಸಾಲ ಖಾತೆ ಸಂಖ್ಯೆ / ಸಾಲಗಾರ/ ಸಹ-ಸಾಲಗಾರ/ಖಾತರಿದಾರರ ಹೆಸರು	(i) 13–2 ದಿನಾಂಕ ನೋಟಿಸೆ ಮತ್ತು ಬೇಡಿಕೆಯ ಮೊತ್ತ (ii) ಸ್ವಾಧೀನದ ದಿನಾಂಕ	ಪ್ರಸ್ತುತ ಉಳಿದಿರುವ ಬಾಕಿ	INR ನಲ್ಲಿ ಮೀಸಲು ಬೆಲೆ	ಅರ್ನೆಸ್ಟ್ ಮನಿ ಡೆಪಾಸಿಟ್ (EMD) INR ನಲ್ಲಿ
1.	1132218860000009 & 1132220290000002/ 1. Mr.D. ಶಿವಕುಮಾರ್ 2. ಶ್ರೀ. B H ಧನ್ಯ ನಾಯ್ಕ್ 3. ಶ್ರೀಮತಿ. ಲೀಲಾ ಬಾಯಿ	(1) 08.12.2021 & ರೂ. 11,03,675/- (ರೂಪಾಯಿಗಳು ಹನ್ನೊಂದು ಲಕ್ಷದ ಮೂರು ಸಾವಿರದ ಆರುನೂರ ಎಪ್ಪತ್ತೈದು ಮಾತ್ರ) 08.12.2021 ರಂತೆ (ii) ಸಾಂಕೇತಿಕ ಸ್ವಾಧೀನ 08.07.2022 ಮತ್ತು ಭೌತಿಕ ಸ್ವಾಧೀನ 20.01.2026	07.11.2026 ರಂತೆ 31,27,696/- (ರೂಪಾಯಿಗಳು ಮೂವತ್ತೊಂದು ಲಕ್ಷ ಇಪ್ಪತ್ತೇಳು ಸಾವಿರದ ಆರುನೂರ ತೊಂಬತ್ತಾರು ಮಾತ್ರ)	ರೂ 14,87,000/- (ರೂಪಾಯಿಗಳು ಹದಿನಾಲ್ಕು ಲಕ್ಷದ ಎಂಬತ್ತೇಳು ಸಾವಿರ ಮಾತ್ರ)	ರೂ. 1,48,700/- (ಒಂದು ಲಕ್ಷದ ನಲವತ್ತೆಂಟು ಸಾವಿರದ ಏಳುನೂರು ರೂಪಾಯಿಗಳು ಮಾತ್ರ)

ಆಸ್ತಿ ವಿವರಣೆ/ಅನುಸೂಚಿ: ಗ್ರಾಮ ಪಂಚಾಯತ್ ಆಸ್ತಿ ಸೈಟ್ ಸಂಖ್ಯೆ 22, ಖಾತಾ ಸಂಖ್ಯೆ 93 ರ ಪ್ರಕಾರ ನಿರ್ಮಿಸಲಾದ ಆಸ್ತಿ ವಸತಿ ಕಟ್ಟಡದ ಎಲ್ಲಾ ಭಾಗ, ಗ್ರಾಮ ಪಂಚಾಯತ್ ಆಸ್ತಿ ಸಂಖ್ಯೆ 22 ರ ಪ್ರಕಾರ, ಇ–ಸ್ವತ್ತು ಸಂಖ್ಯೆ 151200100500400091, 9.144 X 15.24 ಮೀಟರ್ ಅಳತೆ, ಕವಳಿತಂಡ ಗ್ರಾಮ, ಕಥಲೆರೆ ಗ್ರಾಮ ಪಂಚಾಯತ್, ಚನ್ನಗಿರಿಯಲ್ಲಿ ನೆಲೆಗೊಂಡಿದೆ ಮತ್ತು ಇದರ ಸುತ್ತುವರಿದ ಸ್ಥಳ: ಪೂರ್ವ–ಲಂಬಾಬಾಯಿ ಆಸ್ತಿ, ಪಶ್ಚಿಮ–ಚರಂಡಿ, ಉತ್ತರ–ಭೂಮಿ, ದಕ್ಷಿಣ–ರಸ್ತೆ

2.	1132210080000024 1. ಶ್ರೀಬಸವರಾಜ ಜಿ.ಎಂ 2. ಶ್ರೀಮತಿ ರುದ್ರಮ್ಮ	(i) 28.09.2022 & ರೂ. 10,38,810/- (ರೂಪಾಯಿಗಳು ಹತ್ತು ಲಕ್ಷ ಮೂವತ್ತೆಂಟು ಸಾವಿರದ ಎಂಟುನೂರ ಹತ್ತು ಮಾತ್ರ) 28.09.2022/ ರಂತೆ (ii) ಸಾಂಕೇತಿಕ ಸ್ವಾಧೀನ 07.03.2023 ಭೌತಿಕ ಸ್ವಾಧೀನ 26.04.2025	07.11.2026 ರಂತೆ 18,85,866/- (ಹದಿನೆಂಟು ಲಕ್ಷ ಎಂಬತ್ತೈದು ಸಾವಿರದ ಎಂಟುನೂರ ಅರವತ್ತಾರು ರೂಪಾಯಿಗಳು ಮಾತ್ರ)	ರೂ. 2,97,000/- (ಎರಡು ಲಕ್ಷದ ತೊಂಬತ್ತೇಳು ಸಾವಿರ ರೂಪಾಯಿಗಳು ಮಾತ್ರ)	ರೂ. 29,700/- (ಇಪ್ಪತ್ತೊಂಬತ್ತು ಸಾವಿರದ ಏಳುನೂರು ರೂಪಾಯಿಗಳು ಮಾತ್ರ)

ಆಸ್ತಿಯ ಅನುಸೂಚಿ: ಆಸ್ತಿ ಸಂಖ್ಯೆ 10, ಇ ಸ್ವತ್ತು ಸಂಖ್ಯೆ 151200201000700007 ರಲ್ಲಿರುವ ಸ್ಥಿರ ಆಸ್ತಿಯ ಎಲ್ಲಾ ಭಾಗ ಮತ್ತು ವಿಭಾಗ, 13.4112000000000001 X 7.62 ಮೆ. ಅಂದರೆ 102.19 ಚದರ ಮೀಟರ್ ವಿಸ್ತೀರ್ಣ. ದಾವಣಗೆರೆಯ ಕೈದಲೆ ಗ್ರಾಮ ಪಂಚಾಯತ್ನ ಗಿರಿಯಾಪುರ ಗ್ರಾಮದಲ್ಲಿದೆ, ಪೂರ್ವಕ್ಕೆ – ಬಸವರಾಜಯ್ಯನವರ ಮನೆ, ಪಶ್ಚಿಮ–ರಸ್ತೆ, ಉತ್ತರ–ರಸ್ತೆ, ದಕ್ಷಿಣಕ್ಕೆ – ಮಜೀದ್ಬರಯ್ಯನವರ ಆಸ್ತಿಯಿಂದ ಸುತ್ತುವರಿದಿದೆ.

ಇ–ಹರಾಜಿನ ದಿನಾಂಕ ಮತ್ತು ಸಮಯ: 09.12.2026 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ರವರೆಗೆ

ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ಆಸ್ತಿಯ ತಪಾಸಣೆ ದಿನಾಂಕ ಮತ್ತು ಸಮಯ
08.12.2026 ರಂದು ಅಥವಾ ಅದಕ್ಕೂ ಮೊದಲು ಬೆಳಿಗ್ಗೆ 10.00 ರಿಂದ ಸಂಜೆ 5.00 ರವರೆಗೆ.	07.12.2026 ಬೆಳಿಗ್ಗೆ 10.00 ರಿಂದ ಸಂಜೆ 5.00 ರವರೆಗೆ

ಹೆಚ್ಚಿನ ವಿವರಗಳಿಗಾಗಿ ಬ್ಯಾಂಕ್ ಅಧಿಕೃತ ಅಧಿಕಾರಿಯನ್ನು ಸಂಪರ್ಕಿಸಿ: ಶ್ರೀ ನವರತ್ನ – 96633 84014/ ಶ್ರೀ ಟೆಜೋ ಸಾಜನ್ – 78451 92961

ಇ–ಹರಾಜನ್ನು "ಎಲ್ಲಿ ಇದೆಯೋ ಅಲ್ಲಿ" ಮತ್ತು "ಯಾವುದೇ ರೀತಿ ಇದೆಯೋ ಹಾಗೆಯೇ" ಎಂಬ ಆಧಾರದ ಮೇಲೆ ನಡೆಸಲಾಗುತ್ತಿದೆ.
ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಅನುಮೋದಿತ ಇ–ಹರಾಜು ಸೇವಾ ಪೂರೈಕೆದಾರ M/s.C1 ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮೂಲಕ ಇ–ಹರಾಜು ನಡೆಸಲಾಗುವುದು. ಸಂಪರ್ಕ ವ್ಯಕ್ತಿ – ಶ್ರೀ ಪ್ರಭಾಕರನ್ (ಮೊಬೈಲ್ ಸಂಖ್ಯೆ 74182 81709). ಬಿಡ್ಡಾರರು ಬಿಡ್ಡಿಟ್ಟಲ್ಲಿ ಆಸ್ತಿಯ ವಿವರಗಳಿಗಾಗಿ https://www.bankeauctions.com ಅಥವಾ https://www.ujjivansfb.in/e-auction ಗೆ ಭೇಟಿ ನೀಡಬಹುದು ಮತ್ತು ಬಿಡ್ಡಿಗೆ ಭಾಗವಹಿಸಲು ಅವರು ತಮ್ಮ ಹೆಸರುಗಳನ್ನು https://www.bankeauctions.com ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅವರ ಬಳಕೆದಾರ–ಐಡಿ ಮತ್ತು ಪಾಸ್ವರ್ಡ್ ಅನ್ನು ಉಚಿತವಾಗಿ ಪಡೆಯಬೇಕು. ಸಂಭಾವ್ಯ ಬಿಡ್ಡಾರರು ಸೇವಾ ಪೂರೈಕೆದಾರ M/s. C1 ಇಂಡಿಯಾ ಪ್ರೈವೇಟ್ ಲಿಮಿಟೆಡ್, ಸಹಾಯವಾಣಿ ಸಂಖ್ಯೆ– 72919 18824, 25, 26 ಬೆಂಬಲ ಇಮೇಲ್ ಐಡಿ: support@bankeauctions.com, ಹರಾಜು ಪೋರ್ಟಲ್ https://www.bankeauctions.com ನಿಂದ ಇ–ಹರಾಜಿನ ಕುರಿತು ಆನ್ಲೈನ್ ತರಬೇತಿಯನ್ನು ಪಡೆಯಬಹುದು.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ನಮ್ಮ ಬ್ಯಾಂಕಿನ/ಸುರಕ್ಷಿತ ಸಾಲಗಾರರ ವೆಬ್ಪೈಟ್ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ, ಅಂದರೆ..
https://www.ujjivansfb.in/e-auctions/ https://www.bankeauctions.com

ಸಹಿ/–
ಅಧಿಕೃತ ಅಧಿಕಾರಿ
ದಿನಾಂಕ: 18.11.2026 ಉಜ್ಜೀವನ್ ಸಣ್ಣ ಹಣಕಾಸು ಬ್ಯಾಂಕ್

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

IDFC FIRST Bank

(ಈ ಮೊದಲು ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯ